**ದಿನಾಂಕ:13/12/2018 ರಂದು ಗುರುವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

**<u>ಹಾಜರಿದ್ದ ಅಧಿಕಾರಿಗಳು / ನೌಕರರು.</u>**

ಶ್ರೀ/ಶ್ರೀಮತಿ/ಕುಮಾರಿ:

1) ಶ್ರಿನಿವಾಸಮೂರ್ತಿ : ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ, ಮಂಡ್ಯ
2) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
3) ಮರಿಸ್ವಾಮಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
4) ಜಿ. ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ
5) ರೇಖಾ ಎಸ್.ಆರ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
6) ಎನ್.ಜಿ.ಹರೀಶ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
7) ಬೀರಪ್ಪ : ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ
8) ಲಕ್ಷ್ಮಿ : ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ
9) ನಟರಾಜು ಡಿ.ಎನ್ : ಕಿರಿಯ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ/ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ/ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾದ/ ನೀಡಲಾದ ದೂರು ಅಥವಾ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮದ ಬಗ್ಗೆ ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರೊಂದಿಗೆ ಚರ್ಚಿಸಿ ಪರಿಶೀಲಿಸಿದರು.

1) **ಶಾರದಮ್ಮ W/O ವೆಂಕಟೇಗೌಡ, ಜೋಡಿಚಿಕ್ಕನಹಳ್ಳಿ :**

ದೂರು:– ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ನೊಂದಯಿಸಿದ್ದ ಕಾಮಗಾರಿಯ ಬಗ್ಗೆ ವಿಚಾರಿಸಿದರು.

ಕ್ರಮ:– ಮೇಲ್ಕಂಡ ಫಲಾನುಭವಿಗಳಿಗೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ವಿಭಾಗ ಕಛೇರಿಯಿಂದ ವರ್ಕ್‌ಅವಾರ್ಡ್ ಹಾಗಿದ್ದು, ತುರ್ತಾಗಿ ಕೆಲಸ ನಿರ್ವಹಿಸಲು ಗುತ್ತಿಗೆದಾರರಾದ ನಂಜುಂಡೇಶ್ವರಿ ಎಲೆಕ್ಟ್ರಿಕಲ್ಸ್‌ಗೆ ತಿಳಿಸಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.

2) **ರಾಜು, ಸೀತಾಪುರ ಗ್ರಾಮ ಹೊಣಕೆರೆ ॥ಹೋ॥ ಮೊಬೈಲ್ ನಂ:– 9449890211**

ದೂರು:– ಎನ್.ಜೆ.ವೈ (ನಿರಂತರ ಜ್ಯೋತಿ) ಕಲ್ಪಿಸಲು ದೂರು ನೀಡಿದರು.

ಕ್ರಮ:– ಸಿಂಗಲ್ ಫೇಸ್ ವೈರ್ ಎಳೆದು ನಿರಂತರ ಜ್ಯೋತಿ ಒದಗಿಸಲು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿಗಳಿಗೆ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು ಸೂಚಿಸಿದರು.

3) **ಎಚ್.ಎಂ. ನರಸಿಂಹೇಗೌಡ, ಹಾಲ್ತಿ ಮೊಬೈಲ್ ನಂ:–**

ದೂರು:– ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿ ಮಾಡಿ ಸಕ್ರಮೀಕರಣಗೊಂಡಿದ್ದು, ಇದುವರೆಗೆ ಮೂಲಭೂತ ಸೌಕರ್ಯ ಕಲ್ಪಿಸಿರುವುದಿಲ್ಲ. ಗುತ್ತಿಗೆ ನೀಡಲಾದ ಏಜೆನ್ಸಿಯವರಿಗೆ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಬೇಕಾಗಿ ಕೋರಿದರು.

ಕ್ರಮ:– ಗುತ್ತಿಗೆ ನೀಡಲಾದ ಏಜೆನ್ಸಿಯವರಿಗೆ ವಿಭಾಗದಿಂದ ಅವಾರ್ಡ್ ನೀಡಲಾದ ಹಾಗೂ ಪೂರ್ಣಗೊಳಿಸಿದ ಕಾಮಗಾರಿಗಳ ವಿವರವನ್ನು ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಂದ ಮಾಹಿತಿ ಪಡೆದರು. ನಂತರ ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ, ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮಕೈಗೊಳ್ಳ ಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರಿಗೆ ಸೂಚಿಸಿದರು.

4) **ಹುಚ್ಚೇಗೌಡ, ಹುಳ್ಳೇನಹಳ್ಳಿ ಮೊಬೈಲ್ ನಂ:– 9945021511**

ದೂರು:– 1) ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ.

ಕ್ರಮ:– DDUGJY ನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು.

ದೂರು:–2) ಅಕ್ರಮ ಸಕ್ರಮದಲ್ಲಿ ಹಣ ಪಾವತಿಸಿದರು ಸಹ ಪರಿವರ್ತಕವನ್ನು ಅಳವಡಿಸಿಲ್ಲದಿರುವ ಬಗ್ಗೆ ದೂರು ನೀಡಿದರು.

ಕ್ರಮ:– ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ವರ್ಕ್‌ಅವಾರ್ಡ್ ಆಗಿಲ್ಲದ ಕಾರಣ ತುರ್ತಾಗಿ ಇ & ಐ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗೆ ಸೂಚಿಸಿದರು.

5) **ಮಂಜುನಾಥ, ಶಿಲ್ಪಾಪುರ, ಮೊಬೈಲ್ ನಂ:-9880607598**

ದೂರು:- ಐಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ದೂರು ನೀಡಿದರು.

ಕ್ರಮ:- ಈ ಫಲಾನುಭವಿಗಳು ಈಗಾಗಲೇ ವಿದ್ಯುತ್ ಸಂಪರ್ಕಕ್ಕೆ ಅರ್ಜಿನೊಂದಾಯಿಸಿದ್ದು ಸದರಿ ಅರ್ಜಿದಾರರ ಜಮೀನಿನ ಮೇಲೆ ಪೋಲಿಸ್ ಕಂಪ್ಲೇಟ್ ಆದಕಾರಣ ವಿದ್ಯುತ್ ಸಂಪರ್ಕ ನೀಡಲು ತೊಂದರೆಯಾಗುತ್ತಿದ್ದು, ಕೂಲಂಕುಷವಾಗಿ ಈ ವಿಷಯದ ಬಗ್ಗೆ ಪರಿಶೀಲನೆ ಮಾಡಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುತ್ತೇನೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅಧೀಕ್ಷಕ ಇಂಜಿನಿಯರ್ ರವರಿಗೆ ತಿಳಿಸಿದರು.

6) **ನಿಂಗಪ್ಪ, ಗುಂಡುಕಲ್ಲುಹೊಸೂರು ಮೊಬೈಲ್ ನಂ:-9731369418**

ದೂರು:- ಇ & ಐ ಕಾಮಗಾರಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದಿರುವ ಬಗ್ಗೆ ದೂರು ನೀಡಿದರು.

ಕ್ರಮ:- ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕೆಂದು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶಿಸಿದರು.

7) **ತಮ್ಮಣಗೌಡ, ನಾಗಮಂಗಲ ಮೊಬೈಲ್ ನಂ:-9141734225**

ದೂರು:-1) ಮೀಟರ್ ನಿಗಧಿತ ಅವಧಿಯೊಳಗೆ ವಿತರಣೆ ಆಗದಿರುವ ಬಗ್ಗೆ ದೂರು ನೀಡಿದರು.

ಕ್ರಮ:- ಅಧೀಕ್ಷಕ ಇಂಜಿನಯರ್(ವಿ) ರವರು ಮಾಪಕ ಗುತ್ತಿಗೆದಾರರ ಬಳಿ ಪೋನಿನ ಮುಖಾಂತರ ಚರ್ಚಿಸಿದರು. ಮತ್ತು ಆದಷ್ಟು ಬೇಗ ಮಾಪಕ ನಿರ್ವಹಣೆಗಾಗಿ ಪ್ರತ್ಯೇಕ ಕೊಠಡಿಯನ್ನು ಬಾಡಿಗೆಗೆ ಖರೀದಿಮಾಡಿ ಕೆಲಸನಿರ್ವಹಿಸುವಂತೆ ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.

ದೂರು:-2) ಪುರುಷರ ಹಾಗೂ ಸ್ತ್ರೀಯವರ ಪ್ರತ್ಯೇಕ ಶೌಚಾಲದ ವ್ಯವಸ್ಥೆ ಉಪವಿಭಾಗದ ಆವರಣದಲ್ಲಿರುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

ಕ್ರಮ:- ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು ಸಿವಿಲ್ ಅಧಿಕಾರಿಯೊಂದಿಗೆ ಪೋನಿನಲ್ಲಿ ಕಾಮಗಾರಿಯ ಬಗ್ಗೆ ಮಾತನಾಡಿ ಸಮಲೋಚಿಸಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಶೌಚಾಲಯ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ದೂರು:-3) ಮಲ್ಲಸಂದ್ರ ಹತ್ತಿರ ನಿರಂತರ ಜ್ಯೋತಿ ಒದಗಿಸಬೇಕೆಂದು ದೂರಿದರು.

ಕ್ರಮ:- DDUGJY ನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು.

8) **ಗೋವಿಂದರಾಜು, ಮಲ್ಲನಕೊಪ್ಪಲು ಮೊಬೈಲ್ ನಂ:-**

ದೂರು:-1) ಅಕ್ರಮ ಸಕ್ರಮ ಯೋಜನೆಯಡಿಲ್ಲಿ ಅವಾರ್ಡ್‌ಹಾಗಿದ್ದರು ಸಹಕಾಮಗಾರಿ ಪೂರ್ಣಗೊಂಡಿಲ್ಲ ವೆಂದು ದೂರಿದರು.

ಕ್ರಮ:-ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ, ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು

ಕ್ರಮಕೈಗೊಳ್ಳ ಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರಿಗೆ ಸೂಚಿಸಿದರು.

ದೂರು:-2)ಜೋಡಿನೇರಲೆಕೆರೆ ಹತ್ತಿರ ವಾಹಕವನ್ನು ಬದಲಾಯಿಸಲು ದೂರು ನೀಡಿದರು.

ಕ್ರಮ:- 4ACSR ವಾಹಕವನ್ನು Rabbit ವಾಹಕಕ್ಕೆ ಬದಲಾಯಿಸಲು ಅಂದಾಜುಪಟ್ಟಿಯನ್ನು ತಯಾರಿಸಿ ಕಾಮಗಾರಿಯನ್ನು TTK ಯಲ್ಲಿ ನಿರ್ವಹಿಸಲು ಕಾರ್ಯನಿರ್ವಾಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.

9) <u>ಕುಮಾರ್, ಜೈರಾಮು ಗುತ್ತಿಗೆದಾರರು ( ಪೀ.ಜೆ.ಎಲೆಕ್ಟ್ರಿಕಲ್ಸ್) ಮೊಬೈಲ್ ನಂ:-</u>

ದೂರು:- ಇ&ಐ ಬಜೆಟ್‌ಯಿಲ್ಲವೆಂದು ಹೇಳಿ ಬೇರೆಯವರಿಗೆ ವರ್ಕ್‌ಅರ್ಡರ್ ನೀಡಿರುತ್ತಾರೆ ಎಂದು ದೂರು ನೀಡಿದರು.

ಕ್ರಮ:- ಯಾವ ಗುತ್ತಿಗೆದಾರರಿಗೆ ಕಾಮಗಾರಿ ನೀಡಿಲ್ಲ ಅವರಿಗೆ ಕಾಮಗಾರಿ ನಿರ್ವಹಿಸಲು ವರ್ಕ್‌ಅವಾರ್ಡ್ ನೀಡಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.

10) <u>ಸಿದ್ದರಾಜು, ಮಾಚಲಘಟ್ಟ, ಮೊಬೈಲ್ ನಂ:-9481546032</u>

ದೂರು:- 63ಕೆವಿಎ ಟಿಸಿ Over load ಹಾಗಿರುವ ಬಗ್ಗೆ ದೂರು ನೀಡಿದರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಶಾಖಾಧಿಕಾರಿ ಚೀಣ್ಯ ರವರಿಗೆ ಸೂಚಿಸಿದರು. ಇದೇ ರೀತಿ ಸಕ್ರಮಗೊಳ್ಳದ ಐಪಿ ಸ್ಥಾವರಗಳನ್ನು ರೈತರ ಮನವೊಲಿಸಿ ಸಕ್ರಮೀಕರಿಸಿಕೊಳ್ಳಲು ಕ್ರಮ ವಹಿಸುವಂತೆ ಸೂಚಿಸಿದರು.

11) <u>ಆಸಿಬ್ ಪಾಷ, ನಾಗಮಂಗಲ ಮೊಬೈಲ್ ನಂ:-8892112877</u>

ದೂರು:- ವಿದ್ಯುತ್ ಕಂಬವನ್ನು ಸ್ಥಳಾಂತರಿಸುವ ಬಗ್ಗೆ.

ಕ್ರಮ:- IPDSನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು.

12) <u>ಶಿವಪ್ಪ, ತುಪ್ಪದಮಡು ಮೊಬೈಲ್ ನಂ:-9591831895</u>

ದೂರು:- ಅಂಗನವಾಡಿ ಮುಂಭಾಗ ಲೈಟ್ ಕಂಬ ಇಲ್ಲದಿರುವ ಬಗ್ಗೆ ದೂರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿ ರವರಿಗೆ ಸೂಚಿಸಿದರು.

ದೂರು:-ವಾಟರ್ ಸಪ್ಲೇಗೆ ನಿರಂತರ ಜ್ಯೋತಿ ಸಂಪರ್ಕ ಇಲ್ಲದಿರುವ ಬಗ್ಗೆ ದೂರು.

ಕ್ರಮ:- ಮೊದಲು ಬಾಕಿ ಇರುವ ಕುಡಿಯುವ ನೀರು ಸರಬರಾಜು ಹಣವನ್ನು ಪಾವತಿಮಾಡಲು ಸಂಬಂಧಪಟ್ಟ PDO ರವರಿಗೆ ತಿಳಿಸಲು ಸೂಚಿಸಿದರು. ನಂತರ ನಿರಂತರ ಜ್ಯೋತಿ ಸಂಪರ್ಕ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ಸೂಚಿಸಿದರು.

13) <u>ಬಲರಾಜು, ಶಿಕಾರಿಪುರ ಮೊಬೈಲ್ ನಂ:- 9964761819</u>

ದೂರು:-1) ಅಂಗನವಾಡಿ ಮುಂಭಾಗ ಲೈಟ್ ಕಂಬ ಇಲ್ಲದಿರುವ ಬಗ್ಗೆ ದೂರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿ ರವರಿಗೆ ಸೂಚಿಸಿದರು.

ದೂರು:-2) ಹಾಳಾಗಿರುವ ಕಂಬವನ್ನು ಬದಲಾಯಿಸುವ ಬಗ್ಗೆ.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ಅಂದಾಜುಪಟ್ಟಿ ಸಲ್ಲಿಸಿ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸಬೇಕೆಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿ ರವರಿಗೆ ಸೂಚಿಸಿದರು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ :- 13

ಒಟ್ಟು ದೂರು/ಸಮಸ್ಯೆಗಳು :- 19

ಒಟ್ಟು ಹಾಜರಿದ್ದ ಗ್ರಾಹಕರ ಸಂಖ್ಯೆ:-35

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಹಿರಿಯ ಸಹಾಯಕರು ನಾಗಮಂಗಲ ಉಪವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಇಂ(ತಾ)/ನಾ/18-19/ ದಿನಾಂಕ:

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

<u>ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

<u>ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.</u>

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ.